2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ198/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸುಭಾಷ್ ಐ ಬಿ | ಪಿಡಬ್ಲ್ಯೂ-4 |
| ತಂದೆಯ ಹೆಸರು | - | ಟಿ ಎಸ್ ಬಸವರಾಜು | ಸಿಡಬ್ಲ್ಯೂ -4 |
| ವಯಸ್ಸು | - | 37 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಇಂದಾವರ | |

ದಿನಾಂಕಃ 29.12.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಮೃತೆ ಸುಧಾ ಗೊತ್ತು. ಆಕೆ ನನ್ನ ಸಂಬಂಧಿ. ಆರೋಪಿ ಮತ್ತು ಫ್ರಾಸಾ.1 ಗೊತ್ತು. ಅವರು ಮೃತ ಸುಧಾಳ ಮಕ್ಕಳು ಮತ್ತು ನನಗೆ ಸೋದರ ಸಂಬಂಧಿಗಳು. ಸಹ ಪಂಚರಾದ ಚಾಸಾ.5 ಮತ್ತು ಚಾಸಾ.6 ರವರು ಗೊತ್ತು.

2. ಗೌರಿಕಾಲುವೆಯಲ್ಲಿರುವ ಮನೆಯೊಂದರಲ್ಲಿ ಮೃತೆ ಸುಧಾ ಮತ್ತು ಆಕೆಯ ಮಕ್ಕಳು ಭೋಗ್ಯಕ್ಕೆ ವಾಸವಾಗಿದ್ದರು. ಸುಧಾ ಅಕ್ಕಿ ಅಂಗಡಿಗೆ ಕೆಲಸಕ್ಕೆ ಹೋಗುತ್ತಿದ್ದರು. ಫ್ರಾಸಾ.1 ಮನೆಯಲ್ಲಿಯೇ ಇದ್ದುಕೊಂಡು work from home ಮಾಡುತ್ತಿದ್ದನು. ಆರೋಪಿಯನ್ನು ಹೋಟೆಲ್ ನಲ್ಲಿ ಮತ್ತು ಅಕ್ಕಿ ಅಂಗಡಿಯಲ್ಲಿ ಕೆಲಸಕ್ಕೆ ಸೇರಿಸಿದ್ದರು, ಆದರೆ ಆತ ಯಾವುದೇ ಕೆಲಸಕ್ಕೆ ಸರಿಯಾಗಿ ಹೋಗುತ್ತಿರಲಿಲ್ಲ, ಮನೆಯಲ್ಲಿಯೇ ಇರುತ್ತಿದ್ದನು.

3. ದಿನಾಂಕ 23.09.2021 ರಂದು ಆರೋಪಿ ಸುಧಾರವರನ್ನು ಅವರ ಮನೆಯಲ್ಲಿ ಕೊಲೆ ಮಾಡಿದ್ದನು. ಆ ವಿಷಯ ತಿಳಿದಾಗ ನಾನು ಇಂದಾವರ ಗ್ರಾಮದಲ್ಲಿರುವ ನಮ್ಮ ಮನೆಯಲ್ಲಿದ್ದೆನು. ವಿಷಯ ತಿಳಿದಾಗ ನಾನು ಅವರ ಮನೆಯ ಬಳಿ ಹೋಗಿ ಸುಧಾರವರ ಮೃತ ದೇಹವನ್ನು ನೋಡಿದ್ದೇನೆ. ನಂತರ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಸುಧಾರವರ ಮೃತದೇಹವನ್ನು ತೆಗೆದುಕೊಂಡು ಹೋದರು. ಅಲ್ಲಿಯೂ ಸಹ ಸುಧಾರವರ ಮೃತದೇಹವನ್ನು ನೋಡಿದ್ದೇನೆ. ಸುಧಾರವರ ಬಲಭಾಗದ ಕಿವಿ ಹರಿದಿತ್ತು, ಮುಖವನ್ನು ಜಜ್ಜಿ ಹಾಕಲಾಗಿತ್ತು. ಆಸ್ಪತ್ರೆಯ ಬಳಿ ಸುಮಾರು ಜನ ಸೇರಿದ್ದರು. ಅಲ್ಲಿಗೆ ಬಸವನಹಳ್ಳಿ ಪೊಲೀಸರು ಬಂದಿದ್ದರು. ಅವರು ನನ್ನನ್ನು ವಿಚಾರಿಸಿ ಸುಧಾರವರ ಮೃತ ದೇಹದ ಬಳಿ ನನ್ನ ಸಹಿಯನ್ನು ಪಡೆದುಕೊಂಡರು.

4. ಸಾಕ್ಷಿಯು ನೋಟೀಸು ಮತ್ತು ಶವಪಂಚನಾಮೆಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಕ್ರಮವಾಗಿ ನಿಪಿ14 ಮತ್ತು ನಿಪಿ.15 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.14(ಎ) ಮತ್ತು ನಿಪಿ.15(ಎ) ಎಂದು ಗುರುತಿಸಲಾಯಿತು.

5. ಘಟನಾ ದಿನ ಬೆಳಿಗ್ಗೆ ಸುಧಾ, ಪ್ರಾಸಾ.1 ಮತ್ತು ಆರೋಪಿ ದೇವಸ್ಥಾನಕ್ಕೆ ಹೋಗಿ ವಾಪಾಸ್ಸು ಮನೆಗೆ ಹೋಗಿದ್ದಾಗಿ, ಆಗ ಪ್ರಾಸಾ.1 ರವರು ಯಾರೋ ಸ್ನೇಹಿತನ ಅಮ್ಮನಿಗೆ

ಹುಷಾರಿಲ್ಲವೆಂದು ಹೊರಗೆ ಹೋಗಿದ್ದಾಗ ಆರೋಪಿ ಮತ್ತು ಸುಧಾರವರು ಮನೆಯಲ್ಲಿ ಇಬ್ಬರೇ ಇದ್ದಾಗ ಆರೋಪಿ ಸುಧಾರವರ ಬಳಿ ದುಡ್ಡನ್ನು ಕೇಳಿದಾಗ ಆಕೆ ಹಣವನ್ನು ಕೊಡದೇ ಇದ್ದಾಗ ಸಿಟ್ಟಿನಿಂದ ಆಕೆಯ ಮೇಲೆ ಹಲ್ಲೆ ಮಾಡಿ, ಕೊಲೆ ಮಾಡಿದ್ದಾಗಿ ತಿಳಿಯಿತು. ಆರೋಪಿಗೆ ಸಿಗರೇಟ್ ಮತ್ತು ಬೀಡಿ ಸೇದುವ ಅಭ್ಯಾಸವಿತ್ತು. ಪೊಲೀಸರು ಸುಧಾರವರ ಶವದ ಬಳಿ ನನ್ನನ್ನು ವಿಚಾರಿಸುವಾಗ ನನಗೆ ಗೊತ್ತಿದ್ದ ಮಾಹಿತಿಯನ್ನು ತಿಳಿಸಿದ್ದೇನೆ. ಪೊಲೀಸರು ಶವಪಂಚನಾಮೆಯನ್ನು ದಿನಾಂಕ 24.09.2021 ರಂದು ಬೆಳಿಗ್ಗೆ 7.00 ಗಂಟೆಯಿಂದ 10.30 ಗಂಟೆಯವರೆಗೆ ಜರುಗಿಸಿದರು. ಸದರಿ ಪಂಚನಾಮೆಯ ಕಾಲಕ್ಕೆ ಚಾಸಾ.5 ಮತ್ತು ಚಾಸಾ.6 ರವರು ಹಾಜರಿದ್ದು ನನ್ನೊಂದಿಗೆ ಅವರೂ ಸಹ ಸಹಿ ಮಾಡಿದ್ದಾರೆ.

6. ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಪಂಚನಾಮೆಯನ್ನು ಜರುಗಿಸುವ ಸಮಯಕ್ಕೆ ಪೊಲೀಸರು ಫೋಟೋಗಳನ್ನು ತೆಗೆದುಕೊಂಡರು. ಸದರಿ ಫೋಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ನಿಪಿ.7 ರಿಂದ ನಿಪಿ.10 ಎಂದು ಗುರುತಿಸಲಾಗಿರುವ ಫೋಟೋಗಳನ್ನು ನೋಡಿ ಗುರುತಿಸಿ ಅವುಗಳನ್ನು ಪೊಲೀಸರು ಪಂಚನಾಮೆಯ ಕಾಲಕ್ಕೆ ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳ ಪೈಕಿ ನಿಪಿ.7 ರಲ್ಲಿ ತನ್ನ ಹಾಗೂ ಚಾಸಾ.5 ಮತ್ತು ಚಾಸಾ.6 ರವರ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ.8 ರಿಂದ ನಿಪಿ.10 ಫೋಟೋಗಳಲ್ಲಿ ಸುಧಾರವರ ಶವದ

ಮೇಲೆ ಆಗಿದ್ದ ಗಾಯಗಳು ಕಂಡು ಬರುವುದಾಗಿ ನುಡಿದಿರುತ್ತಾರೆ.

ಪಾಟೀ ಸವಾಲುಃ ಶ್ರೀ ಹೆಚ್ ಟಿ ಎಸ್ ಕೆ ವಕೀಲರಿಂದಃ ಆರೋಪಿ ಪರವಾಗಿಃ

7. ನಾನು ಪದವಿವರೆಗೆ ವ್ಯಾಸಂಗ ಮಾಡಿದ್ದೇನೆ. ನೀವು ಮತ್ತು ಫ್ರಾಸಾ.1 ಸಹಪಾಠಿಗಳು ಎಂದರೆ ಸರಿಯಲ್ಲ. ನಿಮ್ಮ ಮತ್ತು ಫ್ರಾಸಾ.1 ರವರ ಜಮೀನುಗಳು ಅಕ್ಕಪಕ್ಕದಲ್ಲಿವೆ ಎಂದರೆ ಸರಿ. ಇಂದಾವರ ಗ್ರಾಮದಲ್ಲಿ 1 ಅಡಿ ಜಾಗಕ್ಕೆ 1 ರಿಂದ 1 ವರೆ ಸಾವಿರ ಬೆಲೆ ಇದೆ ಎಂದರೆ ಇರಬಹುದು. ಇಂದಾವರ ಗ್ರಾಮದ ಪಕ್ಕದಲ್ಲಿ ಸಿ ಡಿ ಎ ಲೇ ಔಟನ್ನು ಮಾಡಲಾಗುತ್ತಿದೆ ಎಂದರೆ ಸರಿ. ಆರೋಪಿಯ ಮಾನಸಿಕ ಸ್ಥಿತಿ ಹೇಗಿತ್ತು ಎಂದರೆ ಸಾಕ್ಷಿ ಆತ ನಾರ್ಮಲ್ ಆಗಿಯೇ ಇದ್ದನು ಎನ್ನುತ್ತಾರೆ. ಆತನನ್ನು ಆಸ್ಪತ್ರೆಗೆ ತೋರಿಸಲಾಗುತ್ತಿತ್ತು ಎಂದರೆ ಸಾಕ್ಷಿ ಮುಂಚೆ ಆತನ ತಾಯಿ ಮತ್ತು ತಮ್ಮ ಕರೆದುಕೊಂಡು ಹೋಗಿ ತೋರಿಸುತ್ತಿದ್ದರಂತೆ ಎನ್ನುತ್ತಾರೆ. ನಾನು ತಿಂಗಳಿಗೆ ಒಮ್ಮೆ ಸುಧಾ ಮತ್ತು ಆಕೆಯ ಮಕ್ಕಳನ್ನು ಭೇಟಿ ಮಾಡುತ್ತಿದ್ದೆನು. ನಾನು ಅವರ ಮನೆಗೆ ಹೋಗುತ್ತಿದ್ದೆನು, ಇಲ್ಲದಿದ್ದರೇ ಅವರೇ ನಮ್ಮ ಗ್ರಾಮದಲ್ಲಿರುವ ಅವರ ಮನೆಗೆ ಬಂದು ಹೋಗುತ್ತಿದ್ದರು. ಗೌರಿಕಾಲುವೆಯಲ್ಲಿದ್ದ ಅವರ ಮನೆಗೆ ಸುಮಾರು 5-6 ಬಾರಿ ಹಬ್ಬ ಹರಿದಿನಗಳಲ್ಲಿ ಹೋಗಿ ಬಂದಿದ್ದೇನೆ. ಆ ಸಮಯದಲ್ಲಿ ಆರೋಪಿ ನಿಮ್ಮೊಂದಿಗೆ ಮಾತನಾಡುತ್ತಿದ್ದನೇ ಎಂದರೆ ಸಾಕ್ಷಿ ಮಾತನಾಡುತ್ತಿದ್ದನು

ಎನ್ನುತ್ತಾರೆ.

8. ನೀವು ಮತ್ತು ಪ್ರಾಸಾ.1 ರವರು ಸುಧಾರವರ ಬಳಿ ಅವರ ಜಮೀನನ್ನು ಸಿ ಡಿ ಎ ಲೇ ಔಟಿಗೆ ಕೊಡುವ ಬಗ್ಗೆ ಮಾತನಾಡಿದ್ದೀರಿ ಎಂದರೆ ಸರಿಯಲ್ಲ. ಆದರೆ ಒಂದು ಬಾರಿ ಅವರ ಜಮೀನು ಸಹ ಸಿ ಡಿ ಎ ಲೇ ಔಟಿಗೆ ಹೋಗಬಹುದು ಎಂದು ಮಾತನಾಡಿದ್ದೇವೆ. ನಿಮ್ಮ ಜಮೀನಿನ ಬಳಿ ಇರುವ ತಮ್ಮ ಜಮೀನನ್ನು ಸಹ ಮಾರಾಟ ಮಾಡುವಂತೆ ಪ್ರಾಸಾ.1 ರವರು ಪ್ರಸ್ತಾಪಿಸಿದ್ದರು ಎಂದರೆ ಸರಿಯಲ್ಲ. ಪ್ರಾಸಾ.1 ರವರು ಸುಧಾರವರನ್ನು ಕುರಿತು ಅವರ ಜಮೀನನ್ನು ಮಾರಾಟ ಮಾಡುವಂತೆ ಪದೇ ಪದೇ ನಿಮ್ಮ ಮೂಲಕ ಮತ್ತು ಇತರೆ ಸಂಬಂಧಿಕರ ಮೂಲಕ ಒತ್ತಾಯ ಏರುತ್ತಿದ್ದರು ಎಂದರೆ ಸರಿಯಲ್ಲ. ಆದರೆ ಸುಧಾರವರು ಆರೋಪಿಗೆ ಮಾನಸಿಕ ಸ್ಥಿತಿ ಸರಿ ಇಲ್ಲದ ಕಾರಣ ಜಮೀನನ್ನು ಮಾರಾಟ ಮಾಡದೇ ಉಳಿಸಿಕೊಂಡು ಬಂದಿದ್ದರು ಎಂದರೆ ಸಾಕ್ಷಿ ಮೊದಲಿನಿಂದಲೂ ಜಮೀನನ್ನು ಉಳಿಸಿಕೊಂಡು ಬಂದಿದ್ದರು ಆದರೆ ಅದಕ್ಕೆ ಆರೋಪಿಯ ಮಾನಸಿಕ ಸ್ಥಿತಿ ಕಾರಣವಲ್ಲ ಎನ್ನುತ್ತಾರೆ. ಆರೋಪಿ ಚೆನ್ನಾಗಿಯೇ ಇದ್ದನು, ಆದರೆ ಆತನಿಗೆ ಸುಧಾರವರು ಯಾವುದೋ ಮಾತ್ರೆಯನ್ನು ಕೊಡಿಸುತ್ತಿದ್ದರು. ಜಮೀನಿನ ವಿಚಾರಕ್ಕೆ ಸುಧಾರವರ ಮನೆಯಲ್ಲಿ ಆಗಾಗ್ಗೆ ಗಲಾಟೆಗಳು ಆಗುತ್ತಿದ್ದವು ಎಂದರೆ ಸರಿಯಲ್ಲ. ಘಟನೆಯಿಂದ 1 ರಿಂದ 2

ವರ್ಷಗಳ ಹಿಂದಿನಿಂದ ಗೌರಿಕಾಲುವೆಯಲ್ಲಿ ಸುಧಾ ಮತ್ತು ಅವರ ಮಕ್ಕಳು ವಾಸವಾಗಿದ್ದರು. ನಿಮ್ಮ ಊರಿನಲ್ಲಿ ಸುಧಾರವರ ಸ್ವಂತ ಮನೆ ಇತ್ತು ಅವರು ಮೊದಲು ಅಲ್ಲಿಯೇ ವಾಸವಾಗಿದ್ದರು ಎಂದರೆ ಸಾಕ್ಷಿ ಅವರ ತೋಟದಲ್ಲಿ ಒಂದೇ ರೂಮಿರುವ ಚಿಕ್ಕ ಮನೆ ಇತ್ತು ಹಾಗಾಗಿ ಅವರು ಅಲ್ಲಿ ವಾಸವಾಗಿರಲಿಲ್ಲ, ಮೊದಲಿಗೆ ಅವರು ಉಪ್ಪಳ್ಳಿಯಲ್ಲಿದ್ದರು ನಂತರ ಗೌರಿಕಾಲುವೆಗೆ ಹೋದರು ಮತ್ತು ಆಗಾಗ್ಗೆ ತೋಟದ ಮನೆಗೆ ಬಂದು ಹೋಗಿ ಮಾಡುತ್ತಿದ್ದರು ಎನ್ನುತ್ತಾರೆ.

9. ಫ್ರಾಸಾ.1 ರವರು ಮೊದಲಿನಿಂದಲೂ ಸಹ ಸಿಟಿಯಲ್ಲಿ ಇರುವಂತೆ ಅವರ ತಾಯಿಗೆ ಒತ್ತಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸುಧಾರವರ ತೋಟದಿಂದ ಬರುತ್ತಿದ್ದ ಆದಾಯವನ್ನು ಸುಧಾರವರೇ ಇರಿಸಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ತೋಟದಿಂದ ಅವರಿಗೆ ಯಾವುದೇ ಆದಾಯ ಬರುತ್ತಿರಲಿಲ್ಲ ಎನ್ನುತ್ತಾರೆ. ಸುಧಾರವರಿಗೆ ಅಕ್ಕಿ ಅಂಗಡಿಯಲ್ಲಿ ತಿಂಗಳಿಗೆ 6 ರಿಂದ 7 ಸಾವಿರ ಸಂಬಳ ಬರುತ್ತಿತ್ತು. ನಮ್ಮ ಅಣ್ಣ ತಮ್ಮಂದಿರಿಂದ ಆರೋಪಿ ಸುಧಾರವರನ್ನು ಕೊಲೆ ಮಾಡಿರುವ ವಿಚಾರ ತಿಳಿಯಿತು. ಸದರಿ ಅಣ್ಣ ತಮ್ಮಂದಿರು ಯಾರು ಎಂದರೆ ಸಾಕ್ಷಿ ಯತೀಶ್, ಮಲ್ಲೇಗೌಡ, ಸೋಮೆಗೌಡ, ಶಿವಾನಂದ, ಬೋರೆಗೌಡ, ಬಸವೇಗೌಡ ಎನ್ನುತ್ತಾರೆ. ವಿಷಯ ತಿಳಿದ ಬಳಿಕ ನಾನು ಸಂಜೆ 6.30 ಗಂಟೆಯಿಂದ 7.00 ಗಂಟೆಯ ಒಳಗೆ ಸುಧಾರವರ ಮನೆಗೆ ಹೋಗಿದ್ದೇನೆ. ಆ ಸಮಯದಲ್ಲಿ ನಾನು

ಸುಧಾರವರ ಮೃತದೇಹವನ್ನು ನೋಡಿದ್ದೇನೆ. ಆಕೆಯ ತಲೆಯನ್ನು ಗೋಡೆಗೆ ಚೆಚ್ಚಿದಂತೆ ಕಂಡು ಬಂದಿತ್ತು ಮತ್ತು ಆಕೆಯ ಕಿವಿಯ ಭಾಗ ಹರಿದಿತ್ತು. ಆ ಸಮಯದಲ್ಲಿ ನಮ್ಮ ಸಂಬಂಧಿಕರು ಮತ್ತು ಇತರರು ಸೇರಿದ್ದರು. ನಂತರ ಸುಧಾರವರ ದೇಹವನ್ನು ಆಸ್ಪತ್ರೆಗೆ ಸಾಗಿಸಲಾಯಿತು.

10. ಪೊಲೀಸರು ನಿಮಗೆ ನೋಟಿಸನ್ನು ಕೊಟ್ಟರೇ ಎಂದರೆ ಸಾಕ್ಷಿ ಮೃತ ದೇಹದ ಬಳಿಯೇ ವಿಚಾರಿಸಿ ಸಹಿಯನ್ನು ತೆಗೆದುಕೊಂಡರು ಎನ್ನುತ್ತಾರೆ. ಫ್ರಾಸಾ.3 ನಿಮ್ಮ ಸ್ನೇಹಿತ ಎಂದರೆ ಸರಿ. ಈ ದಿನ ಆತನಿಗೆ ನೀವು ಫೋನ್ ಮಾಡಿ ಆತನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದೀರಿ ಎಂದರೆ ಸರಿಯಲ್ಲ.

11. ಘಟನಾ ದಿನ ಬೆಳಿಗ್ಗೆ ಸುಧಾ, ಫ್ರಾಸಾ.1 ಮತ್ತು ಆರೋಪಿ ದೇವಸ್ಥಾನಕ್ಕೆ ಹೋಗಿ ವಾಪಾಸ್ಸು ಮನೆಗೆ ಹೋಗಿದ್ದಾಗಿ, ಆಗ ಫ್ರಾಸಾ.1 ರವರು ಯಾರೋ ಸ್ನೇಹಿತನ ಅಮ್ಮನಿಗೆ ಹುಷಾರಿಲ್ಲವೆಂದು ಹೊರಗೆ ಹೋಗಿದ್ದಾಗ ಆರೋಪಿ ಮತ್ತು ಸುಧಾರವರು ಮನೆಯಲ್ಲಿ ಇಬ್ಬರೇ ಇದ್ದಾಗ ಆರೋಪಿ ಸುಧಾರವರ ಬಳಿ ದುಡ್ಡನ್ನು ಕೇಳಿದಾಗ ಆಕೆ ಹಣವನ್ನು ಕೊಡದೇ ಇದ್ದಾಗ ಸಿಟ್ಟಿನಿಂದ ಆಕೆಯ ಮೇಲೆ ಹಲ್ಲೆ ಮಾಡಿ, ಕೊಲೆ ಮಾಡಿದ್ದಾಗಿ ತಿಳಿಯಿತು ಎಂದು ತಿಳಿಸಿದ್ದೀರಿ ಆ ವಿಚಾರವನ್ನು ನಿಮಗೆ ಯಾರು ಹೇಳಿದರು ಎಂದರೆ ಸಾಕ್ಷಿ ಆರೋಪಿ ಮತ್ತು ಫ್ರಾಸಾ.1 ರವರ ದೊಡ್ಡಪ್ಪ ಸೋಮೆಗೌಡ ಹೇಳಿದರು ಎನ್ನುತ್ತಾರೆ.

ಆ ರೀತಿ ಯಾವುದೇ ವಿಚಾರವನ್ನು ನಿಮಗೆ ಸೋಮೆಗೌಡರವರು ತಿಳಿಸಿಲ್ಲ ಎಂದರೆ ಸರಿಯಲ್ಲ.

12. ಆರೋಪಿಗೆ ಸಿಗರೇಟ್ ಮತ್ತು ಬೀಡಿ ಸೇದುವ ಅಭ್ಯಾಸವಿತ್ತು ಎಂದು ಹೇಳಿದ್ದೀರಿ ಅದನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎನ್ನುತ್ತಾರೆ. ಘಟನಾ ಸಮಯದಲ್ಲಿ ಫ್ರಾಸಾ.1 ರವರು ಮನೆಯಿಂದ ಹೊರಗೆ ಹೋಗಿದ್ದಾಗಿ ತಿಳಿಯಿತು. ಪೊಲೀಸರು ಶವಪಂಚನಾಮೆಯನ್ನು ದಿನಾಂಕ 24.09.2021 ರಂದು ಬೆಳಿಗ್ಗೆ 7.00 ಗಂಟೆಯಿಂದ 10.30 ಗಂಟೆಯವರೆಗೆ ಜರುಗಿಸಿದರು ಮತ್ತು ನೀವು ಆ ಸಮಯದಲ್ಲಿ ಹಾಜರಿದ್ದಿರಿ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

13. ನಿಪಿ.15 ರಲ್ಲಿ ಬರೆದಿರುವ ವಿಚಾರಗಳು ನಿಮಗೆ ತಿಳಿದಿವೆಯೇ ಎಂದರೆ ಸಾಕ್ಷಿ ಆರೋಪಿ ಸುಧಾರವರನ್ನು ಕೊಲೆ ಮಾಡಿದ್ದಾನೆ ಆ ಬಗ್ಗೆ ಸುಧಾರವರ ಮರಣೋತ್ತರ ಪರೀಕ್ಷೆ ನಡೆಯಬೇಕು ಎಂದು ಬರೆದಿದ್ದಾರೆ ಎನ್ನುತ್ತಾರೆ. ಆಸ್ತಿಯ ವಿಚಾರಕ್ಕೆ ಫ್ರಾಸಾ.1 ರವರು ತನ್ನ ತಾಯಿಯೊಂದಿಗೆ ಗಲಾಟೆ ಮಾಡುತ್ತಿದ್ದ ವಿಚಾರ ನಿಮಗೆ ತಿಳಿದಿದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೊಲೀಸರು ಹೇಳಿದ್ದರಿಂದ ನಿಪಿ.7 ಫೋಟೋದಲ್ಲಿ ನಿಂತಿದ್ದೀರಿ ಹೊರತು ನಿಮಗೆ ಈ ಪ್ರಕರಣದ ಬಗ್ಗೆ ಬೇರೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಮಾಹಿತಿ

ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಮಾನಸಿಕ ಅಸ್ವಸ್ಥನಾಗಿರುವುದು ನಿಮಗೆ ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ